ಆ) ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ?

ಡಾ. ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.— ಮಾನ್ಯ ಅಧ್ಯಕ್ಷರೆ 1984ನೇ ಇಸವಿಯಲ್ಲಿ ದೇವನಹಳ್ಳಿಗೆ 30 ಹಾಸಿಗೆಗಳುಳ್ಳ ಒಂದು ಆಸ್ಪತ್ರೆ ಮಂಜೂರು ಆಗಿದೆ, ಅದಕ್ಕಾಗಿ 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ನಿವೇಶನ ಇಲ್ಲವೆಂದು ಆಸ್ಪತ್ರೆಯ ಶಂಕು ಸ್ಥಾಪನೆಯ ಕೆಲಸವನ್ನು ಮಾಡಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಳಿಯ ವಶದಲ್ಲಿ ನಾಲ್ಕು ಎಕರೆ ಭೂಮಿ ಇದೆ. ಅದನ್ನು ಬಿಟ್ಟುಕೊಡುತ್ತೇವೆಂದು ತಾಲ್ಲೂಕು ಬೋರ್ಡ್‌ನವರು ಸರ್ಕಾರಕ್ಕೆ ತಿಳಿಸಿದ್ದಾರೆ. ದೇವನಹಳ್ಳಿ ಕಸಬಾ ಹೋಬಳಿಯಲ್ಲಿ 40 ಎಕರೆ ಸರ್ಕಾರಿ ಭೂಮಿ ಇದೆ. ಅಲ್ಲಿ ಆಸ್ಪತ್ರೆ, ನ್ಯಾಯಾಲಯ, ಕಿರಿಯ ಕಾಲೇಜು, ಕೈಗಾರಿಕಾ ತರಬೇತಿ ಕೇಂದ್ರ ಎಲ್ಲವನ್ನು ಮಾಡಿಕೊಳ್ಳಬಹುದು ಅದಕ್ಕೋಸ್ಕರ ಸರ್ಕಾರಿ ಭೂಮಿಯನ್ನು ಪಡೆದು ಕೊಳ್ಳಲು ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡುತ್ತಾರೆಯೆ ?

ಡಾ. ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಪಂಚಾಯಿತಿಯವರು, ಮುನಿಸಿಪಾಲಿಟಿಯವರು ಮತ್ತು ತಾಲ್ಲೂಕು ಬೋರ್ಡ್‌ಗಳವರನ್ನು ಜಾಗ ಕೊಡಬೇಕೆಂದು ಕೇಳಲಾಗಿದ್ದು, ಇದುವರೆಗೆ ಅವರು ಯಾರೂ ನಿವೇಶನವನ್ನು ಕೊಡಲಿಲ್ಲ. ಆಸ್ಪತ್ರೆ ಮಂಜೂರು ಆಗಿದೆ, ಬಡ್ಜೆಟ್‌ನಲ್ಲಿ ಹಣವನ್ನು ಸಹ ಒದಗಿಸಿಕೊಳ್ಳಲಾಗಿದೆ. ಕೆಲಸ ಪ್ರಾರಂಭ ಆಗದೇ ಇರುವುದಕ್ಕೆ ಕಾರಣ ನಿವೇಶನ. ಮಾನ್ಯ ಸದಸ್ಯರು ಸರ್ಕಾರಿ ಭೂಮಿ ಇದೆಯೆಂದು ಹೇಳುತ್ತಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ವ್ಯವಹಾರ ಮಾಡಿ, ನಿವೇಶನ ಸಿಕ್ಕಿದರೆ ತಕ್ಷಣ ಕೆಲಸವನ್ನು ಶುರು ಮಾಡುತ್ತೇವೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—40 ಎಕರೆ ಭೂಮಿಯಲ್ಲಿ ಆಸ್ಪತ್ರೆಗೆ ಜಾಗವನ್ನು ಪಡೆದು ಕೊಂಡು ಆಸ್ಪತ್ರೆಯ ಶಂಕು ಸ್ಥಾಪನೆಯ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಡಾ. ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸಡಸ್ಯರು ಹೇಳತಕ್ಕ ಭೂಮಿ ಸರ್ಕಾರಿ ಭೂಮಿಯಾಗಿದ್ದರೆ, ರೆವಿನ್ಯೂ ಇಲಾಖೆಯವರು ಭೂಮಿಯನ್ನು ರಿಲೀಸ್ ಮಾಡಬೇಕು. ಅದರ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಹೇಳತಕ್ಕ ಭೂಮಿಯ ಸರ್ವೆ ನಂಬರು ಇತರೆ ಮಾಹಿತಿಗಳನ್ನು ಕೊಟ್ಟರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಬರೆದು ಭೂಮಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇನೆ.

ವಿಷಯ : ಉಡುಪಿ ಸರ್ಕಾರಿ ಆಸ್ಪತ್ರೆಯಲ್ಲಿರುವ ಕ್ಷ-ಕಿರಣ ಘಟಕ.

ಪ್ರ. ಸಂಖ್ಯೆ 107 (439) ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿರುವ ಕ್ಷ-ಕಿರಣ ಯಂತ್ರವು 6 ವರ್ಷಗಳಿಂದ ಉಪಯೋಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಹೊಸ ಕ್ಷ-ಕಿರಣ ಯಂತ್ರವನ್ನು ಯಾವಾಗ ಅಳವಡಿಸುತ್ತೀರಾ ?

ಡಾ. ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ, ಉಡುಪಿ ಆಸ್ಪತ್ರೆಯಲ್ಲಿ ಅವ್ಯವಹಾರ ಪಡೆಯುತ್ತಿದೆ. ಕ್ಷಯ ರೋಗಿಗಳಿಗೆ ವೈದ್ಯರುಗಳು ಚುಚ್ಚುಮದ್ದು ಕೊಡುತ್ತಿಲ್ಲ, ಚುಚ್ಚುಮದ್ದುಗಳನ್ನು ಹೊರಗಡೆ ತರಲು ಚೀಟಿ ಬರೆದು ಕಳುಹಿಸುತ್ತಾರೆ. ಆಸ್ಪತ್ರೆಯ ನೈರ್ಮಲ್ಯವನ್ನು ಅಲ್ಲಿನ ಸಿಬ್ಬಂದಿ ಕೆಡಿಸಿ ಇಟ್ಟಿದ್ದಾರೆ. ಮಾನ್ಯ ಸಚಿವರು ಆಕಸ್ಮಿಕ ಭೇಟಿಯನ್ನು ಕೊಟ್ಟು ಪರಿಶೀಲಿಸುವರೆ ?

ಡಾ. ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರಿಯವರು ಆಸ್ಪತ್ರೆಗೆ ಆಕಸ್ಮಿಕ ಭೇಟಿಕೊಡಬೇಕೆಂದು ಹೇಳಿದ್ದಾರೆ, ಅದನ್ನು ಮಾಡುತ್ತೇನೆ. ತಪ್ಪು ಮಾಹಿತಿಯನ್ನು ಕೊಡಲಾಗಿದೆ ಎಂದು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ಆರು ವರ್ಷಗಳ ಹಿಂದೆ ಇದ್ದಂತಹ ಕ್ಷ-ಕಿರಣ ಯಂತ್ರ ಕೆಟ್ಟುಹೋಗಿತ್ತು. ಆದಕ್ಕೆ ಹಣವನ್ನು ಒದಗಿಸಿಕೊಟ್ಟು ಅದನ್ನು ರೀ-ಪ್ಲೇಸ್ ಮಾಡತಕ್ಕ ಕೆಲಸ ನಡೆಯುತ್ತಿದೆ.